# ರ್‍ಯಾಗಿಂಗ್ ತಡೆಯುವ ಬಗ್ಗೆ ಅರಿವು ಕಾರ್ಯಕ್ರಮ



"ರ್‍ಯಾಗಿಂಗ್ ತಡೆಯುವ ಬಗ್ಗೆ ಅರಿವು ಕಾರ್ಯಕ್ರಮದಲ್ಲಿ ಉಪನ್ಯಾಸದಲ್ಲಿ ನೀಡುತ್ತಿರುವ ನಿವೃತ್ತ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಮೀನಾಕ್ಷಿ ಖಾದರ್ ರವರು







ದಿನಾಂಕ 22-02-2023 ರ ಬುಧವಾರ ಸಕಲೇಶಪುರ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ರ್‍ಯಾಗಿಂಗ್ ತಡೆಯುವ ಬಗ್ಗೆ ಅರಿವು ಕಾರ್ಯಕ್ರಮವನ್ನು ನಡೆಸಲಾಯಿತು.

ಕಾರ್ಯಕ್ರಮದ ಮುಖ್ಯ ಭಾಷಣಕಾರರಾಗಿ ಆಗಮಿಸಿದ ನಿವೃತ್ತ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಮೀನಾಕ್ಷಿ ಖಾದರ್ ರವರು ರ್‍ಯಾಗಿಂಗ್ ವಿಧಗಳ ಕುರಿತಂತೆ ವಿವರಿಸುತ್ತಾ ಕಾಲೇಜು ಆವರಣದಲ್ಲಿ ರ್‍ಯಾಗಿಂಗ್ ಮಾಡುವುದರಿಂದ ವಿದ್ಯಾರ್ಥಿಗಳು ಅನುಭವಿಸುವ ನೋವುಗಳ ಬಗ್ಗೆ ವಿವರವಾಗಿ ವಿವರಿಸಿದರು. ನಂತರ ಕಾಲೇಜು ಆವರಣದಲ್ಲಿ ರ್‍ಯಾಗಿಂಗ್ ತಡೆಗಟ್ಟಲು ಯುಜಿಸಿ ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರಿಸುತ್ತಾ, ಕಾಲೇಜುಗಳ ಪ್ರಾಸ್ಪೆಕ್ಟಸ್ ಮತ್ತು ಬ್ರೋಚರ್‌ಗಳಲ್ಲಿ ಆ್ಯಂಟಿ ರ್‍ಯಾಗಿಂಗ್ ಬಗ್ಗೆ ಸ್ಪಷ್ಟ ಎಚ್ಚರಿಕೆ ಪ್ರಕಟಿಸಬೇಕು, ಪ್ರಮುಖ ಸ್ಥಳಗಳಲ್ಲಿ ಸಿಸಿಟಿವಿ ಅಳವಡಿಸಬೇಕು, ಆ್ಯಂಟಿ ರ್‍ಯಾಗಿಂಗ್ ಕಮಿಟಿಯ ನೋಡೆಲ್ ಆಫಿಸರ್ ಅವರ ಸಂಪೂರ್ಣ ವಿಳಾಸ ಮತ್ತು ಸಂಪರ್ಕ ಸಂಖ್ಯೆಯನ್ನು ಕಾಲೇಜುಗಳ ವೆಬ್‌ಸೈಟ್, ಮಾಹಿತಿ ಬುಕ್‌ಲೆಟ್ ಸೇರಿದಂತೆ ವಿದ್ಯಾರ್ಥಿಗಳಿಗೆ ಸುಲಭವಾಗಿ ಲಭ್ಯವಾಗುವಂತೆ ಪ್ರಕಟಿಸಬೇಕು ಎಂದು ತಿಳಿಸಿದರು.

ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ವಿಕ್ರಮ ಸಿ.ಬಿ ರವರು ಕಾಲೇಜು ಆವರಣದಲ್ಲಿ ರ್‍ಯಾಗಿಂಗ್ ಮಾಡಿದರವರನ್ನು ಅಥವಾ ನಿಯಮ ಉಲ್ಲಂಘಿಸಿದ ವಿದ್ಯಾರ್ಥಿಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಡಾ. ನಂಜುಂಡಪ್ಪ ಎಸ್ ರವರು ಸಂಸ್ಥೆಯ ಸಿಬ್ಬಂದಿ ವರ್ಗದವರು ಪ್ರಶಿಕ್ಷಣಾರ್ಥಿಗಳೊಂದಿಗೆ ನಿರಂತರ ಸಂಪರ್ಕ, ಅವರಿಗೆ ಆಪ್ತಸಮಾಲೋಚನೆ ಹಾಗೂ ಆ್ಯಂಟಿ ರ್‍ಯಾಗಿಂಗ್ ಕಮಿಟಿ ಸದಸ್ಯರು ಕಾಲೇಜಿನ ಒಳಾಂಗಣ, ಹೊರಾಂಗಣ, ಹಾಸ್ಟೆಲ್‌ಗಳು ಸೇರಿದಂತೆ ಕ್ಯಾಂಪಸ್‌ನ ವಿವಿಧ ಸ್ಥಳಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲಿಸಬೇಕು' ಎಂದು ಸೂಚಿಸಿದರು.

ಕಾರ್ಯಕ್ರಮದಲ್ಲಿ ಪ್ರಶಿಕ್ಷಣಾರ್ಥಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

PRINCIPAL
J.S.S. Institute of Education
P.B. 26, SAKALESHPUR-573 134
Hassan Dist